<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.</u>

**ಸಿ.ಸಿ. ಸಂಃ 154/2024**

| | | |
|---|---|---|
| ಸಾಕ್ಷಿಯ ಹೆಸರುಃ | ಸ್ವಾಮಿ | ಫ್ರಾಸಾಃಃ 03 |
| ತಂದೆಯ ಹೆಸರುಃ | ಕಾಳಯ್ಯ | ಚಾಸಾಃಃ 01 |
| ವಯಸ್ಸುಃ | 35 ವರ್ಷ | ಪ್ರಮಾಣೀಕರಿಸಿದ ದಿಃ 06.02.2026 |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ಹರವೆ ಮಲ್ಲರಾಜಪಟ್ಟಣ ಗ್ರಾಮ, ಪಿರಿಯಾಪಟ್ಟಣ ತಾಃ | |

<u>ಮುಖ್ಯ ವಿಚಾರಣೆಃ ಸಸಅ ರಿಂದಃ</u>

1. ನನಗೆ ಆರೋಪಿಯ ಪರಿಚಯವಿಲ್ಲ. ಮೃತ ಕಾಳಯ್ಯ ರವರು ನನ್ನ ತಂದೆ. ದಿಃ 11.10.2023 ರಂದು ಸಂಜೆ 7-00 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿ ಇದ್ದಾಗ ಯಾರೋ ನನಗೆ ಪೋನ್ ಮಾಡಿ ನನ್ನ ತಂದೆಗೆ ಹರವೆ ಮಲ್ಲರಾಜ ಪಟ್ಟಣದ ಲೇಔಟ್ ಬಳಿ ಬೆಟ್ಟದಪುರ – ಪಿರಿಯಾಪಟ್ಟಣ ರಸ್ತೆಯಲ್ಲಿ ಅಪಘಾತವಾಗಿರುವುದಾಗಿ ತಿಳಿಸಿರುತ್ತಾರೆ. ನಾನು ಕೂಡಲೇ ಸ್ಥಳಕ್ಕೆ ಹೋಗಿ ನೋಡಲಾಗಿ ನನ್ನ ತಂದೆಯ ತಲೆಗೆ, ಬಾಯಿಗೆ ಎಡ ಭುಜಕ್ಕೆ ಹಾಗೂ ಮೈಕೈಗೆ ಗಾಯಗಳಾಗಿದ್ದವು. ಕೂಡಲೇ ಅವರನ್ನು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಂತರ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ.ಆರ್ ಆಸ್ಪತ್ರೆಗೆ ನಂತರ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇವೆ. ನಂತರ ದಿಃ 17.10.2023 ರಂದು ನನ್ನ ತಂದೆ ಮೈಸೂರಿನ ಕೆ.ಆರ್ ಆಸ್ಪತ್ರೆಯಲ್ಲಿ ಮೃತರಾಗಿರುತ್ತಾರೆ. ಸದರಿ ವಿಚಾರವನ್ನು ನಾನು ಪೊಲೀಸರಿಗೆ ತಿಳಿಸಿರುತ್ತೇನೆ. ಆ ಸಮಯದಲ್ಲಿ ಪೊಲೀಸರು ಕೆಲವು ಖಾಲಿ ಹಾಳೆಗೆ ಸಹಿ ಪಡೆದಿರುತ್ತಾರೆ. ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೊತ್ತಿಲ್ಲ.

2. ಸಾಕ್ಷಿಯು ದೂರಿನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ. **2** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.**2**(ಎ) ಎಂದು ಗುರುತಿಸಲಾಯಿತು. ನಿಪಿ -2 ಕ್ಕೆ ನಾನು ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ನಿಪಿ.2 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಮರು ಹೇಳಿಕೆ ನೀಡಿಲ್ಲ.

**(ಈ ಸಮಯದಲ್ಲಿ ಸಹಾಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)**

<u>ಪಾಟೀ ಸವಾಲುಃ ಸಸಅ ರವರಿಂದಃ</u>

1. ನಾನು ಅಘಾತದ ವಿಚಾರ ತಿಳಿದು ಸ್ಥಳಕ್ಕೆ ಹೋದಾಗ ಅಲ್ಲೇ ಇದ್ದ ಚಾಸಾ - 3 ರವರನ್ನು ವಿಚಾರಿಸಲಾಗಿ ಅವರು ತಿಳಿಸಿದ್ದೇನೆಂದರೆ, ಸಂಜೆ 6.30 ಗಂಟೆ ಸಮಯದಲ್ಲಿ, ಪಿರಿಯಾಪಟ್ಟಣ ತಾಲ್ಲೂಕು ಹರವೆ ಮಲ್ಲರಾಜಪಟ್ಟಣ ಗ್ರಾಮದ ಡಿ.ಆರ್ ಶೆಟ್ಟಿ ಸನ್ಸ್ ಸ್ವರ್ಣ ಭೂವಿ ಪೋರ್ಟ್ ಲೇಔಟ್ ಮುಂದೆ ಹಾದು ಹೋಗಿರುವ ಬೆಟ್ಟದಪುರದ – ಪಿರಿಯಾಪಟ್ಟಣ ಮುಖ್ಯ ರಸ್ತೆಯ ಪೂರ್ವ ಭಾಗದ ಪುಟ್ ಪಾತ್ ನಲ್ಲಿ, ನನ್ನ ತಂದೆ ಮೃತ ಕಾಳಯ್ಯ ರವರು ತಮ್ಮ ಜಮೀನಿನಿಂದ ಮನೆಯ ಕಡೆಗೆ ನಡೆದುಕೊಂಡು ಹೋಗುವಾಗ, ಈ ಪ್ರಕರಣದ ಆರೋಪಿಯು ಕೆ.ಎ-09-ಹೆಚ್.ಜಿ-3654 ಹೊಂಡಾ ಶೈನ್ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನನ್ನ ತಂದೆಗೆ ಡಿಕ್ಕಿಪಡಿಸಿದರು ಎಂದು ತಿಳಿಸಿದರು ಎಂದರೆ ಸರಿಯಲ್ಲ. ಸದರಿ ಚಾಲಕನ ಹೆಸರು ಕೇಳಲಾಗಿ ಕೆ.ಕೃಷ್ಣೇಗೌಡ ಬಿನ್ ತಿಮ್ಮೇಗೌಡ ಎಂದು ತಿಳಿಸಿದರು ಎಂದರೆ ಸರಿಯಲ್ಲ.

2. ಸದರಿ ಅಪಘಾತಕ್ಕೆ ನ್ಯಾಯಾಲಯದ ಮುಂದಿರುವ ಆರೋಪಿಯ ಅತೀವೇಗ ಹಾಗೂ ಅಜಾಗರೂಕತೆಯ ಚಾಲನೆಯೇ ಕಾರಣ ಎಂದು ನಾನು ನಿಪಿ - 2 ರಂತೆ ಪೊಲೀಸರಿಗೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

3. ನಂತರ ದಿಃ 18.10.2023 ರಂದು ಈಗ ಓದಿ ಹೇಳಿ ಕೇಳಿಸಿಕೊಂಡಂತೆ "ನಾನು ಮೇಲ್ಕಂಡ ವಿಳಾಸದಲ್ಲಿ ..........ನನ್ನ ಮಂದುವದರಿದ ದೂರನ್ನು ನೀಡಿರುತ್ತೇನೆ' ಎಂದು ನಾನು ಮುಂದುವರಿದ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮುಂದುವರಿದ ದೂರನ್ನು ನಿಪಿ - 3 ಎಂದು ಗುರುತಿಸಲಾಯಿತು.

4. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ವಕೀಲರಿಂದಃ</u>

ಇಲ್ಲ.

<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>
<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ